# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **2235** |
| ಸದಸ್ಯರ ಹೆಸರು | : ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | : ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 18-03-2022 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಒಟ್ಟು ನೋಂದಾಯಿತ ವಾಹನಗಳ ಸಂಖ್ಯೆ ಎಷ್ಟು; (ವರ್ಗವಾರು ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು ನೋಂದಾಯಿತ ವಾಹನಗಳ ಸಂಖ್ಯೆಯ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ. | ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬಸ್ಸುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | <u>ಕ.ರಾ.ರ.ಸಾ.ನಿಗಮ</u><br><br>ಕೋವಿಡ್-19 ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ಘೋಷಿಸಿದ್ದ ಲಾಕ್ ಡೌನ್ ತೆರವಿನ ನಂತರ ನಿಗಮದ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಕಡಿಮೆ ಇದ್ದುದರಿಂದ ಕೋವಿಡ್ ಪೂರ್ವದಲ್ಲಿ ಇದ್ದಂತಹ ಎಲ್ಲಾ ಅನುಸೂಚಿಗಳ ಕಾರ್ಯಾಚರಣೆಯನ್ನು ಒಟ್ಟಿಗೆ ಪ್ರಾರಂಭಿಸದೇ ಸಾರ್ವಜನಿಕ ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಅವಶ್ಯಕತೆ ಹಾಗೂ ಸಂಚಾರ ದಟ್ಟಣೆಗೆ ಅನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದ್ದು, ಆಯಾ ಮಾರ್ಗಗಳಲ್ಲಿ ಉಂಟಾಗುವ ಪ್ರಯಾಣಿಕರ ಒತ್ತಡವನ್ನು ಪರಿಗಣಿಸಿ, ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.<br><br>ಪ್ರಸ್ತುತ ಶಾಲಾ-ಕಾಲೇಜು ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕ ಪ್ರಯಾಣಿಕರ ಒತ್ತಡಕ್ಕನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಪ್ರಸ್ತುತ ಕಲ್ಪಿಸಿರುವ ಸಾರಿಗೆ ಸೌಲಭ್ಯವು ಅವಶ್ಯಕತೆಗನುಗುಣವಾಗಿರುತ್ತದೆ.<br><br>ಗ್ರಾಮೀಣ ಪ್ರದೇಶಗಳ ಸಾರ್ವಜನಿಕ ಪ್ರಯಾಣಿಕರ/ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಸಾರಿಗೆ ಸೇವೆಗಳನ್ನು ಹೆಚ್ಚಿಸಿಕೊಂಡು ಕಾರ್ಯಾಚರಣೆ ಮಾಡಲಾಗುತ್ತಿದೆ. |

| | | |
|---|---|---|
| | | ಕ.ಕ.ರ.ಸಾ.ಸಂ.<br><br>ಕ.ಕ.ರ.ಸಾ.ನಿಗಮದ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಪ್ರಯಾಣಿಕರ ಹಾಗೂ ವಿದ್ಯಾರ್ಥಿಗಳ ಬೇಡಿಕೆಗನುಸಾರವಾಗಿ ಅನುಸೂಚಿಗಳನ್ನು/ ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ.<br><br>ನಿಗಮದ ವ್ಯಾಪ್ತಿಯಲ್ಲಿ ಒಟ್ಟು 5287 ಜನವಸತಿ ಗ್ರಾಮಗಳಿದ್ದು, ಅವುಗಳಲ್ಲಿ 5237 ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಉಳಿದ 50 ಗ್ರಾಮಗಳಿಗೆ ರಸ್ತೆ ಸಂಪರ್ಕ ಇಲ್ಲದ ಪ್ರಯುಕ್ತ ಸಾರಿಗೆ ಸೌಲಭ್ಯ ಕಲ್ಪಿಸಿರುವುದಿಲ್ಲ. ನಿಗಮದ ವ್ಯಾಪ್ತಿಯಲ್ಲಿನ ಹದಗೆಟ್ಟಿರುವ ರಸ್ತೆ ದುರಸ್ತಿಪಡಿಸುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಹಾಗೂ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಇವರಿಗೆ ದಿನಾಂಕ:11-10-2021 ರಂದು ಪತ್ರ ಬರೆಯಲಾಗಿರುತ್ತದೆ.<br><br>ವಾ.ಕ.ರ.ಸಾ.ಸಂ.<br><br>ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ಈ ಸಮಸ್ಯೆಯನ್ನು ಪರಿಹರಿಸಲು ಸಾರ್ವಜನಿಕ ಪ್ರಯಾಣಿಕರು ಹಾಗೂ ವಿದ್ಯಾರ್ಥಿಗಳಿಗೆ ಅವಶ್ಯಕತೆಗೆ ಅನುಗುಣವಾಗಿ ಸುತ್ತುವಳಿ / ಅನುಸೂಚಿಗಳನ್ನು ಅಳವಡಿಸಿ ಸಾರಿಗೆ ಸೌಲಭ್ಯ ಕಲ್ಪಿಸಲಾಗಿರುತ್ತದೆ. |
| ಇ. | ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಗಡಿಗ್ರಾಮಗಳು ಮತ್ತು ಕುಗ್ರಾಮಗಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಲು ಕೈಗೊಂಡ ಕ್ರಮಗಳೇನು? | ಸಾರಿಗೆ ನಿಗಮಗಳಿಂದ ರಾಜ್ಯದಲ್ಲಿನ ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸೌಲಭ್ಯ ಕಲ್ಪಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಗಡಿಗ್ರಾಮಗಳು ಮತ್ತು ಕುಗ್ರಾಮಗಳಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಲು ಯಾವುದೇ ಯೋಜನೆ ಇರುವುದಿಲ್ಲ. |

ಟಿಡಿ 50 ಟಿಡಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ
ಪಂಗಡಗಳ ಕಲ್ಯಾಣ ಸಚಿವರು.

# ಅನುಬಂಧ-1

## ರಾಜ್ಯದಲ್ಲಿ ಒಟ್ಟು ನೋಂದಾಯಿತ ವಾಹನಗಳ ಸಂಖ್ಯೆಯ ವಿವರ

| ವಾಹನಗಳ ವರ್ಗ | 31-03-2021ರ ಅಂತ್ಯಕ್ಕೆ ನೋಂದಣಿ ಯಾದ ಒಟ್ಟು ವಾಹನಗಳು | 1-4-2021 ರಿಂದ 31-1-2022 ರವರೆಗೆ ನೋಂದಣಿಯಾದ ಒಟ್ಟು ವಾಹನಗಳು | 31-1-2022ರ ಅಂತ್ಯಕ್ಕೆ ನೋಂದಣಿಯಾದ ಒಟ್ಟು ವಾಹನಗಳು |
|---|---|---|---|
| ಸಾರಿಗೇತರ ವಾಹನಗಳು | | | |
| ದ್ವಿ ಚಕ್ರ ವಾಹನಗಳು | 19362961 | 634040 | 19997001 |
| ಕಾರುಗಳು | 3937889 | 161100 | 4098989 |
| ಆಮ್ನಿ ಬಸ್ಸುಗಳು | 16520 | 224 | 16744 |
| ಟ್ರ್ಯಾಕ್ಟರ್‌ಗಳು | 631147 | 37306 | 668453 |
| ಟ್ರೈಲರ್‌ಗಳು | 336333 | 12385 | 348718 |
| ನಿರ್ಮಾಣ ಸಾಮಗ್ರಿ ವಾಹನಗಳು | 7889 | 2126 | 10015 |
| ಖಾಸಗಿ ಸೇವಾ ವಾಹನಗಳು | 1577 | 73 | 1650 |
| ಇತರೆ ವಾಹನಗಳು | 97559 | 5314 | 102873 |
| ಒಟ್ಟು ಸಾರಿಗೇತರ ವಾಹನಗಳು (ಎ) | **24391875** | **852568** | **25244443** |
| ಸರಕು ವಾಹನಗಳು | | | |
| ಮಲ್ಟಿ ಆಕ್ಸಲ್ಡ್ /ಆರ್ಟಿ ಕ್ಯುಲೇಟೆಡ್ ವಾಹನಗಳು | 19656 | 286 | 19942 |
| ಟ್ರಕ್ಸ್ ಮತ್ತು ಲಾರಿಗಳು | 491633 | 10490 | 502123 |
| ಒಟ್ಟು | **511289** | **10776** | **522065** |
| ಲಘು ಸರಕು ವಾಹನಗಳು | | | |
| 4 ಚಕ್ರಗಳ ವಾಹನಗಳು | 567418 | 25088 | 592506 |
| 3 ಚಕ್ರಗಳ ವಾಹನಗಳು | 203118 | 5307 | 208425 |
| ಒಟ್ಟು | **770536** | **30395** | **800931** |
| ಬಸ್ಸುಗಳು | 263857 | 1146 | 265003 |
| ಒಟ್ಟು | **263857** | **1146** | **265003** |
| ಟ್ಯಾಕ್ಸಿಗಳು | | | |
| ಮೋಟಾರು ಕ್ಯಾಬ್ | 338842 | 3363 | 342205 |
| ಮ್ಯಾಕ್ಸಿ ಕ್ಯಾಬ್ | 115363 | 274 | 115637 |
| ಇತರೆ ಕ್ಯಾಬ್‌ಗಳು | 305 | 0 | 305 |
| ಒಟ್ಟು | **454510** | **3637** | **458147** |
| ಲಘು ಪ್ರಯಾಣಿಕರ ವಾಹನಗಳು | | | |
| 3 ಆಸನಗಳ ವಾಹನಗಳು | 732750 | 8966 | 741716 |
| ಇತರೆ ವಾಹನಗಳು | 149300 | 5636 | 154936 |
| ಒಟ್ಟು | **882050** | **14602** | **896652** |
| ಒಟ್ಟು ಸಾರಿಗೆ ವಾಹನಗಳು(ಬಿ) | **2882242** | **60556** | **2942798** |
| ಒಟ್ಟು (ಸಾರಿಗೆ+ಸಾರಿಗೇತರ) (ಎ+ಬಿ) | **27274117** | **913124** | **28187241** |

ಅಪರ ಸಾರಿಗೆ ಆಯುಕ್ತರು (ಆಡಳಿತ)
ಬೆಂಗಳೂರು